# ಸಾಹಿತಿಗಳ ಒಡನಾಟ; ಅದೊಂದು ಹಬ್ಬದೂಟ

**ಚಿತ್ರದುರ್ಗದ ಕಲ್ಲಿನ ಕೋಟೆಯ ಊರಿನಿಂದ ಮಲೆನಾಡ ಕುಪ್ಪಳ್ಳಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಭಾಗವಹಿಸಲು ಹೋದ ನನಗೆ ನನ್ನ ಅಚ್ಚುಮೆಚ್ಚಿನ ಸಾಹಿತಿ ನಾ. ಡಿಸೋಜ ಅವರೊಂದಿಗೆ ಒಡನಾಡುವ ಅವಕಾಶ ಒದಗಿಬಂದಿತ್ತು. ಇದೊಂದು ಸವಿನೆನಪಾಗಿ ನನ್ನ ಜೀವನದಲ್ಲಿ ಬೆಚ್ಚಗೆ ಉಳಿದಿದೆ.**

■ ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ



ಸಾಹಿತ್ಯದ ಬಗ್ಗೆ ಅಪಾರ ಒಲವಿದ್ದ ನನಗೆ ಅವರೊಂದಿಗಿನ ಒಡನಾಟ ಎಂದಿಗೂ ಪ್ರಿಯವಾದ ವಿಷಯವೇ.

ನಾನು 7ನೇ ತರಗತಿ ಓದುತ್ತಿದ್ದಾಗಲೇ ತ.ರಾ. ಸು., ಕೆ.ಎಸ್. ನಿಸಾರ ಅಹಮದ್ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಜಿ.ಹೆಚ್. ಸಿದ್ದಲಿಂಗಯ್ಯ, ಜಿ.ಪಿ. ರಾಜರತ್ನಂ, ಗೋಪಾಲಕೃಷ್ಣ ಅಡಿಗ ಮುಂತಾದವರ ಸಾಹಿತ್ಯಗಳನ್ನು ಓದುತ್ತಿದ್ದೆ. ಸಹಜವಾಗಿಯೇ ಅವರ ಬಗ್ಗೆ ಪ್ರೀತಿ ಬೆಳೆಸಿಕೊಂಡೆ.

ನನ್ನ ಅಚ್ಚುಮೆಚ್ಚಿನ ಸಾಹಿತಿ ಡಾ.ನಾ. ಡಿಸೋಜ. ಮಲೆನಾಡಿನ ಮನೆಮಾತಾಗಿರುವ ಅವರು ಸರಳ, ಸಜ್ಜನಿಕೆ, ಮುಗ್ಧ, ಸ್ನೇಹ ಜೀವಿ. ಅವರ ಬಹುತೇಕ ಬರಹಗಳನ್ನೂ ಓದಿದ್ದೆ, ಅವರು ಲೋಕೋಪಯೋಗಿ ಇಲಾಖೆ ಬೆರಳಚ್ಚುಗಾರರಾಗಿ ಸೇರಿದ್ದರಿಂದ ಇಲಾಖೆಯಲ್ಲಿ ನಡೆಯುವ ಅಂತರ್ಯ ಬಾಹ್ಯ ಘಟನೆಗಳನ್ನು ಮುಲಾಜಿಲ್ಲದೆ, ಸಣ್ಣ ಸಣ್ಣ ಕಥಾರೂಪದಲ್ಲಿ ಬರೆದು ಪ್ರಕಟ ಮಾಡುತ್ತಿದ್ದರು. ಹಾಗೆಯೇ ಜೀವಮಾನದಲ್ಲೇ ಲಂಚ ಪಡೆಯದ ನಿಷ್ಠಾವಂತ. ಅವರ ಬರಹಗಳೆಲ್ಲ ಮೂರು ನಿಘಂಟುಗಳಲ್ಲಿ ಪ್ರಕಟವಾಗಿವೆ. ನಾ. ಡಿಸೋಜ ಅವರ ಕಥೆಗಳು 'ಸುಧಾ ಪತ್ರಿಕೆ'ಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿವೆ. 'ಸುಣ್ಣ ಹಚ್ಚಿದ ಸಮಾಧಿಗಳು', 'ಮುಳುಗಡೆ', 'ಒಡ್ಡು', 'ಗುಣವಂತೆ'... ಇತ್ಯಾದಿ, ಅವರ 'ದ್ವೀಪ' ಕಾದಂಬರಿ ಚಲನಚಿತ್ರವಾಗಿದ್ದು, ರಾಷ್ಟ್ರೀಯ ಸ್ವರ್ಣ ಕಮಲ ಪ್ರಶಸ್ತಿ ಪಡೆದಿದೆ. ಅದು ವಿಶ್ವದ ಹತ್ತಾರು ದೇಶದ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಗೊಂಡು ಪಾರಿತೋಷಕ ಪಡೆದಿದೆ.

ಅವರನ್ನು ನೋಡಬೇಕೆಂಬ ಹಂಬಲ ನನ್ನದಾಗಿತ್ತು. ಒಂದು ದಿನ ಅನಿರೀಕ್ಷಿತ ಆಮಂತ್ರಣ ಬಂದು ಅದರಲ್ಲಿ 'ಕನ್ನಡ ಕ್ರೈಸ್ತ ಬರಹಗಾರರ ಕನ್ನಡ ಸಾಹಿತ್ಯ ವಿಚಾರ ಸಂಕಿರಣ' ಕುಪ್ಪಳ್ಳಿ, ಅಧ್ಯಕ್ಷತೆ ಡಾ. ನಾ. ಡಿಸೋಜ ಎಂದಿತ್ತು. ನನಗಾದ ಸಂತೋಷ ಅಷ್ಟಿಷ್ಟಲ್ಲ. ಅದು ಮಲೆನಾಡಿನ ಮಧ್ಯೆ ರಾಷ್ಟ್ರಕವಿ ಕುವೆಂಪುರವರು ಹುಟ್ಟಿ, ಆಡಿ ಕಳೆದ ಊರು, ಒಂದೇ ಒಂದು ಮನೆ ಅದು 'ಕವಿ ಮನೆ'. ನಮಗೆ ಉಳಿಯಲು ವ್ಯವಸ್ಥೆ ಮಾಡಿದ್ದು ಕುವೆಂಪುರವರ ಜನ್ಮ ಶತಾಬ್ಧಿಗಾಗಿ ಸರ್ಕಾರ ನಿರ್ಮಾಣ ಮಾಡಿದ 'ಹೇಮಾಂಗಣ'. ಅದು ಕುವೆಂಪುರವರ ಹೆಂಡತಿ ಹೇಮಾವತಿ ಅವರ ಹೆಸರಲ್ಲಿ, ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ವಿಶಾಲ ವೇದಿಕೆ, ಸುಸಜ್ಜಿತ ಕೊಠಡಿಗಳು, ದೃಶ್ಯ ಶ್ರವಣ ಕೊಠಡಿ, ವಾಚನಾಲಯ, ಕುವೆಂಪು ತೇಜಸ್ವಿಯವರ ಚಿತ್ರ ಗ್ಯಾಲರಿ ಇತ್ಯಾದಿಗಳಿವೆ.

ಪ್ರಯಾಣದ ಆಯಾಸದಿಂದ ಕೊಠಡಿಯಲ್ಲಿ ಉಳಿದು ಫ್ರೆಶ್ ಆಗಿ ಮುಖ್ಯದ್ವಾರದ ಬಾಗಿಲಲ್ಲಿ ಕುಳಿತುಕೊಂಡೆ, ಸ್ವಲ್ಪ ಹೊತ್ತಿನಲ್ಲೇ ನನಗೆ ಆಶ್ಚರ್ಯ, ಆನಂದ.. ಬಂದವರು ನಾ. ಡಿಸೋಜ ಆಗಿದ್ದರು, ತಕ್ಷಣ ಎದ್ದು ವಂದಿಸಿ, ಹಸ್ತಲಾಘವ ಮಾಡಿ ಪರಿಚಯಿಸಿಕೊಂಡೆ, ಮನತುಂಬಿ ಮಾತುಗಳು ನಡೆದವು, ಸಂವಾದ ಕಾರ್ಯಕ್ರಮದಲ್ಲಿ ಮಿಂಚಿದವರು ನಾ.ಡಿಸೋಜ ಅವರೇ. ಊಟ, ಕಾಫಿ, ತಿಂಡಿ ಜೊತೆಜೊತೆಯಲ್ಲಿ ಮೂರೂ ದಿನಗಳು ನಡೆದವು.

ದುರ್ಗ ಕಲ್ಲಿನ ಕೋಟೆ ನನ್ನದಾದರೆ, ಮಲೆನಾಡ ಪ್ರಕೃತಿ ವೈಭವ ಅವರದು, ಅವರ ಅನುಭವ ಅಪಾರ, ಅವರನ್ನು ಕಂಡು ಮಾತನಾಡಬೇಕು ಎಂಬ ನನ್ನ ಆಸೆ ಪೂರೈಸಿದ್ದು ನನ್ನ ಸುಕೃತ, ಕುಪ್ಪಳ್ಳಿಯ ವೇದಿಕೆಯಲ್ಲಿ ತೆಗೆದ ಫೋಟೊ ಇದು. ಜೊತೆಯಲ್ಲಿ ಅವರ ಪತ್ನಿಯೂ ಇದ್ದಾರೆ. ಇದು ನನ್ನ ಜೀವನದ ಸವಿನೆನಪಿನ ಬುತ್ತಿಯಲ್ಲಿ ಬೆಚ್ಚಗೆ ಕುಳಿತಿದೆ.

■